ಕರ್ನಾಟಕ ಸರ್ಕಾರ

# ತರಳಬಾಳು

# ಜಿಲ್ಲಾ ಜೈವಿಕ ಇಂಧನ ಮಾಹಿತಿ ಮತ್ತು ಪ್ರಾತ್ಯಕ್ಷಿಕಾ ಕೇಂದ್ರ, ದಾವಣಗೆರೆ.



## "ಜೈವಿಕ ಇಂಧನ" ಪರಿಚಯ





ಕೇಸರಿವನ, ತೋಳಹುಣಸೆ

ದಾವಣಗೆರೆ ವಿಶ್ವವಿದ್ಯಾನಿಲಯದ ಎದುರು ದಾವಣಗೆರೆ

ದೂರವಾಣಿ : 08192 – 263462/294568

ಮಿಂಚಂಚೆ : dvgtkvk@yahoo.com


ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ

ನಂ 116, 8ನೇ ಅಡ್ಡರಸ್ತೆ, ರೈಲ್ವೆ ಸಮನಾಂತರ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020

ದೂ: 080–23568199 ಟೆಲಿಫ್ಯಾಕ್ಸ್: 080–23568200


Website: www.biofuelkarnataka.com Email: pschairmanbiofuels@gmail.com

11. **ಸಮುದಾಯದ ಸಹಭಾಗತ್ವ :** ಜೈವಿಕ ಇಂಧನ ಅಭಿವೃದ್ಧಿ ಎಲ್ಲಾ ಚಟುವಟಿಕೆಗಳಲ್ಲಿ ಸಮುದಾಯದ ಸಂಪೂರ್ಣ ಸಹಭಾಗಿತ್ವವನ್ನು ಸಾಧಿಸುವತ್ತ ಇಡೀ ರಾಜ್ಯದಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಜಾಲವನ್ನು ನಿರ್ಮಿಸುವ ಪ್ರಯತ್ನ ನಡೆದಿದೆ. ಈಗಾಗಲೇ ಪ್ರತಿ ಜಿಲ್ಲೆಯಲ್ಲಿ ನೋಡಲ್ ಸ್ವಯಂ ಸೇವಾ ಸಂಸ್ಥೆಗಳನ್ನು ಗುರುತಿಸುವ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ. ಪ್ರಸ್ತುತ ಕಾರ್ಯನಿರತವಾಗಿರುವ ಸ್ವಯಂ ಸೇವಾ ಸಂಸ್ಥೆಗಳ ಮಾಹಿತಿಯನ್ನು ಮಂಡಳಿಯ ವೆಬ್‌ಸೈಟ್‌ನಲ್ಲಿ ಪಡೆಯಬಹುದು.

## ಪ್ರಮುಖ ಜೈವಿಕ ಇಂಧನ ಸಸ್ಯಗಳ ಮಾಹಿತಿ :



| | |
|---|---|
| ಸಸ್ಯದ ಹೆಸರು | : **ಹೊಂಗೆ** |
| ಹೂ ಬಿಡುವಿಕೆ | : ಮಾರ್ಚ್ – ಮೇ |
| ಕಾಯಿ ಕೊಯ್ಲು | : ಜನವರಿ – ಮಾರ್ಚ್ |
| ಉಪಯೋಗ | : ಜೈವಿಕ ಇಂಧನ, ಸಾಬೂನು ತಯಾರಿಕೆ, ಚರ್ಮ ಹದ ಮಾಡಲು, ಹಿಂಡಿಯನ್ನು ಗೊಬ್ಬರವಾಗಿ, ಹಸಿರೆಲೆ ಹೊಬ್ಬರ. |
| ಇಳುವರಿ ಪ್ರಾರಂಭ | : 5 ವರ್ಷ |
| ಬೀಜ ಇಳುವರಿ (ಕೆಜಿ) | : 15 – 40 |
| ಎಣ್ಣೆ ಅಂಶ (ಶೇಕಡ) | : 27 – 35% |
| ಬೆಲೆ (ಕೆ.ಜಿ.ಬೀಜಕ್ಕೆ) ರೂ | : 10 – 15 |



| | |
|---|---|
| ಸಸ್ಯದ ಹೆಸರು | : **ಜಟ್ರೋಫ** |
| ಹೂ ಬಿಡುವಿಕೆ | : ಮೇ – ಆಗಸ್ಟ್ |
| ಕಾಯಿ ಕೊಯ್ಲು | : ಆಗಸ್ಟ್ – ಅಕ್ಟೋಬರ್ |
| ಉಪಯೋಗ | : ಜೈವಿಕ ಇಂಧನ, ಕ್ರಿಮಿಕೀಟ ನಿವಾರಣೆ, ಹಿಂಡಿಯನ್ನು ಗೊಬ್ಬರವಾಗಿ. |
| ಇಳುವರಿ ಪ್ರಾರಂಭ | : 3 ವರ್ಷ |
| ಬೀಜ ಇಳುವರಿ (ಕೆಜಿ) | : 1 – 2 |
| ಎಣ್ಣೆ ಅಂಶ (ಶೇಕಡ) | : 35 – 40% |
| ಬೆಲೆ (ಕೆ.ಜಿ.ಬೀಜಕ್ಕೆ) ರೂ | : 3 – 6 |



| | |
|---|---|
| ಸಸ್ಯದ ಹೆಸರು | : **ಬೇವು** |
| ಹೂ ಬಿಡುವಿಕೆ | : ಮಾರ್ಚ್ – ಮೇ |
| ಕಾಯಿ ಕೊಯ್ಲು | : ಜೂನ್ – ಆಗಸ್ಟ್ |
| ಉಪಯೋಗ | : ಜೈವಿಕ ಇಂಧನ, ಔಷಧ, ಕ್ರಿಮಿಕೀಟ ನಿವಾರಣೆ,ಹಿಂಡಿಯನ್ನು ಗೊಬ್ಬರವಾಗಿ. |
| ಇಳುವರಿ ಪ್ರಾರಂಭ | : 5 ವರ್ಷ |
| ಬೀಜ ಇಳುವರಿ (ಕೆಜಿ) | : 10 – 25 |
| ಎಣ್ಣೆ ಅಂಶ (ಶೇಕಡ) | : 28 – 35% |
| ಬೆಲೆ (ಕೆ.ಜಿ.ಬೀಜಕ್ಕೆ) ರೂ | : 3 – 8 |



| | |
|---|---|
| ಸಸ್ಯದ ಹೆಸರು | : **ಸಿಮರೂಬ** |
| ಹೂ ಬಿಡುವಿಕೆ | : ಡಿಸೆಂಬರ್ – ಫೆಬ್ರವರಿ |
| ಕಾಯಿ ಕೊಯ್ಲು | : ಫೆಬ್ರವರಿ – ಏಪ್ರಿಲ್ |
| ಉಪಯೋಗ | : ಜೈವಿಕ ಇಂಧನ, ಔಷಧ, ಅಡುಗೆ ಎಣ್ಣೆ, ಕ್ರಿಮಿಕೀಟ ನಿವಾರಣೆ, ಹಿಂಡಿಯನ್ನು ಗೊಬ್ಬರವಾಗಿ. |
| ಇಳುವರಿ ಪ್ರಾರಂಭ | : 5 – 6 ವರ್ಷ |
| ಬೀಜ ಇಳುವರಿ (ಕೆಜಿ) | : 10 – 25 |
| ಎಣ್ಣೆ ಅಂಶ (ಶೇಕಡ) | : 40 – 50% |
| ಬೆಲೆ (ಕೆ.ಜಿ.ಬೀಜಕ್ಕೆ) ರೂ | : 8 – 12 |

ವಿಶ್ವದಾದ್ಯಂತ ಹೆಚ್ಚುತ್ತಿರುವ ಕಚ್ಚಾ ತೈಲದ ಬೇಡಿಕೆಯಿಂದ ತೈಲ ಬೆಲೆಗಳು ಸತತವಾಗಿ ಹೆಚ್ಚುತ್ತಿವೆ. ಇದರಿಂದಾಗಿ ರಾಷ್ಟ್ರದ ಆರ್ಥಿಕ ವ್ಯವಸ್ಥೆ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುತ್ತಿದೆ. ನಮ್ಮ ರಾಷ್ಟ್ರಕ್ಕೆ ಅಗತ್ಯವಿರುವ ಶೇ.85 ರಷ್ಟು ಕಚ್ಚಾ ತೈಲವನ್ನು ವಿದೇಶಗಳಿಂದ ಆಮದು ಮಾಡಿಕೊಂಡು ಉಪಯೋಗಿಸುತ್ತಿದ್ದೇವೆ. ಕೊಟ್ಯಾಂತರ ರೂಪಾಯಿಗಳನ್ನು ಇದಕ್ಕಾಗಿ ವ್ಯಯಿಸುತ್ತಿದ್ದೇವೆ. ಮಿತಿ ಮೀರಿದ ಬಳಕೆಯಿಂದ ನಿತ್ಯದ ಕಚ್ಚಾತೈಲ ಸಂಪನ್ಮೂಲ ಕ್ಷೀಣಿಸುತ್ತಿದೆ. ಅತಿಯಾದ ಪೆಟ್ರೋಲಿಯಂ ಬಳಕೆಯಿಂದ ಪರಿಸರ ಮಾಲಿನ್ಯ ಹೆಚ್ಚಾಗುತ್ತಿದ್ದು, ಹಸಿರು ಮನೆ ಪರಿಣಾಮದಿಂದ ತಾಪಮಾನ ವೈಪರೀತ್ಯಗಳು ಕಂಡುಬರುತ್ತಿವೆ. ಇದರಿಂದ ಬದಲಿ ಇಂಧನ ಮೂಲಗಳ ಬಳಕೆಗೆ ಪ್ರಾಮುಖ್ಯತೆ ಹೆಚ್ಚಾಗುತ್ತಿದೆ. ಕಚ್ಚಾ ತೈಲದ ಪರ್ಯಾಯ ಸ್ವರೂಪದಂತಿರುವ ಮತ್ತು ಕಚ್ಚಾ ತೈಲದ ಬಳಕೆಯನ್ನು ಹತೋಟಿಯಲ್ಲಿರಿಸಬಲ್ಲ ಸಾಮರ್ಥ್ಯ ಜೈವಿಕ ಇಂಧನಕ್ಕಿದೆ.

ವಿವಿಧ ಬಗೆಯ ಎಣ್ಣೆಬೀಜಗಳು, ಪಿಷ್ಟ, ಕಬ್ಬು ಮತ್ತಿತರ ಶರ್ಕರಾಂಶಗಳಿರುವ ಸಸ್ಯಮೂಲಗಳು ಮತ್ತು ಪ್ರಾಣಿಜನ್ಯ ಮೂಲಗಳಿಂದ ಉತ್ಪಾದನೆಯಾಗುವ ಇಂಧನಗಳನ್ನು ಜೈವಿಕ ಇಂಧನ ಎಂದು ಕರೆಯಲಾಗುತ್ತದೆ. ನಮ್ಮ ಪರಿಸರದಲ್ಲಿ ಹಾಸು ಹೊಕ್ಕಾಗಿರುವ ಸಸ್ಯಗಳಾದ ಹೊಂಗೆ, ಬೇವು, ಹಿಪ್ಪೆ, ಜಟ್ರೋಫ, ಸಿಮರೂಬ, ನಾಗಸಂಪಿಗೆ, ಸುರಹೊನ್ನೆ ಮೊದಲಾದವುಗಳಿಂದ ಬರುವ ಎಣ್ಣೆಯನ್ನು ಬಳಸಿ ಜೈವಿಕ ಡೀಸೆಲನ್ನು ಉತ್ಪಾದನೆ ಮಾಡಬಹುದಾಗಿದೆ. ಕಬ್ಬು, ಜೋಳ, ಸಿಹಿಜೋಳ, ಮುಂತಾದ ಸಕ್ಕರೆ ಅಂಶವುಳ್ಳ ಉತ್ಪನ್ನಗಳು ಮತ್ತು ಕೃಷಿ ತ್ಯಾಜಗಳಿಂದ ಜೈವಿಕ ಎಥೆನಾಲ್‌ಅನ್ನು ತಯಾರಿಸಬಹುದಾಗಿದೆ. ನಮ್ಮ ದೇಶದಲ್ಲಿ ಇಂತಹ ಸಸ್ಯಗಳನ್ನು ಬೆಳೆಸುವುದಕ್ಕೆ ಬೇಕಾಗಿರುವ ವಾತಾವರಣ ಮತ್ತು ಭೂಪ್ರದೇಶಗಳು ಲಭ್ಯವಿದ್ದು ಸುಮಾರು 100ಕ್ಕೂ ಹೆಚ್ಚಿನ ತೈಲ ಉತ್ಪಾದಕ ಸಸ್ಯ ಪ್ರಭೇದಗಳನ್ನು ಹೊಂದಿದೆ.

ಜೈವಿಕ ಇಂಧನ ಕ್ಷೇತ್ರದ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರ ಹಲವಾರು ಕಾರ್ಯಕ್ರಮಗಳನ್ನು ಕೈಗೊಂಡಿದೆ. ದಿನಾಂಕ 12-09-2008ರಲ್ಲಿ ರಾಷ್ಟ್ರದಲ್ಲಿಯೇ ಪ್ರಪ್ರಥಮವಾಗಿ "ಜೈವಿಕ ಇಂಧನ ಕಾರ್ಯಪಡೆ" ರಚಿಸುವ ಮೂಲಕ ದಿನಾಂಕ 01-03-2009ರಂದು ಕರ್ನಾಟಕ ರಾಜ್ಯ ಜೈವಿಕ ಇಂಧನ ನೀತಿ ಜಾರಿಗೊಳಿಸಿದೆ. ಜೈವಿಕ ಇಂಧನ ನೀತಿ ಅನುಷ್ಠಾನಗೊಳಿಸುವ ಹಾಗೂ ಈ ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ರಚಿಸಿದ "ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ" ದಿನಾಂಕ 06-12-2010ರಿಂದ ಕಾರ್ಯಪ್ರವರ್ತವಾಗಿದೆ.

**ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ದ್ಯೇಯೋದ್ದೇಶಗಳು**

- ಜೈವಿಕ ಇಂಧನ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸುವುದು ಹಾಗೂ ಅನುಷ್ಠಾನಗೊಳಿಸುವುದು.
- ವಿವಿಧ ಪ್ರದೇಶಗಳಿಗೆ ಯೋಗ್ಯವಾದ ಜೈವಿಕ ಇಂಧನ ಸಸ್ಯಗಳನ್ನು ಬೆಳೆಸಲು ಕೃಷಿಯೇತರ ಭೂಮಿಯನ್ನು ಗುರುತಿಸುವುದು.
- ಜೈವಿಕ ಎಥನಾಲ್ ಉತ್ಪಾದನೆಗಾಗಿ ಕಬ್ಬು, ಬೀಟ್‌ರೂಟ್, ಗೋವಿನ ಜೋಳ ಮುಂತಾದ ಬೆಳೆಗಳ ಬೇಸಾಯವನ್ನು ಪ್ರೋತ್ಸಾಹಿಸುವುದು.
- ಜೈವಿಕ ಇಂಧನ ಮತ್ತು ಇತರೆ ಉಪ ಉತ್ಪನ್ನಗಳ ಬಳಕೆಯನ್ನು ಪ್ರೋತ್ಸಾಹಿಸುವುದು.
- ಎಥನಾಲ್ ಉತ್ಪಾದನೆ ಮತ್ತು ಬಳಕೆಯನ್ನು ಹೆಚ್ಚಿಸುವುದು.
- ಜೈವಿಕ ಇಂಧನ ಸಸ್ಯಗಳನ್ನು ಬೆಳೆಸಲು ಸಮುದಾಯದ ಸಹಭಾಗಿತ್ವದಲ್ಲಿ ಕಾರ್ಯಕ್ರಮಗಳನ್ನು ರೂಪಿಸುವುದು.
- ರೈತರಿಗಾಗಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
- ಮೌಲ್ಯವರ್ಧನೆಗಾಗಿ ಬೀಜ ಸಂಗ್ರಹಣಾ ಜಾಲ ನಿರ್ಮಿಸುವುದು ಹಾಗೂ ಜೈವಿಕ ಇಂಧನ ಉತ್ಪಾದನಾ ಘಟಕಗಳನ್ನು ಸ್ಥಾಪಿಸುವುದು.
- ವಿಶ್ವವಿದ್ಯಾಲಯ ಹಾಗೂ ಸಂಶೋಧನಾ ಸಂಸ್ಥೆಗಳನ್ನು ಜೈವಿಕ ಇಂದನ ಕ್ಷೇತ್ರದ ಸಂಶೋಧನೆಯಲ್ಲಿ ತೊಡಗಿಸುವುದು.

ದಿನಾಂಕ 13-01-2012 ರಂದು ಉದ್ಘಾಟನೆಗೊಂಡ **'ತರಳಬಾಳು ಜಿಲ್ಲಾ ಜೈವಿಕ ಇಂಧನ ಮಾಹಿತಿ ಮತ್ತು ಪ್ರಾತ್ಯಕ್ಷಿಕಾ ಕೇಂದ್ರವು'** ದಾವಣಗೆರೆ ಜಿಲ್ಲೆಯ ಜನಸಾಮಾನ್ಯರಲ್ಲಿ ಜೈವಿಕ ಇಂಧನ ತಿಳುವಳಿಕೆಯನ್ನು ಹೆಚ್ಚಿಸುವ ಕಾರ್ಯವನ್ನು ಪರಿಣಾಮಕಾರಿಯಾಗಿ ನಿರ್ವಹಿಸುತ್ತಿದೆ. ಕೇಂದ್ರವು ನಗರದಿಂದ 12 ಕಿ.ಮೀ. ದೂರದಲ್ಲಿರುವ ಕೇಸರಿವನ, ತೋಳಹುಣಸೆಯಲ್ಲಿದೆ.

ಗ್ರಾಮೀಣ ಭಾಗದಲ್ಲಿರುವ ಜಮೀನು ರಹಿತ ರೈತ ಕುಟುಂಬಗಳು ಹೊಂಗೆ ಮತ್ತಿತರ ಎಣ್ಣೆ ಕಾಳು ಬೀಜಗಳನ್ನು ಆಯ್ದು ಆರ್ಥಿಕಲಾಭಗಳಿಸುವ ಪ್ರಕ್ರಿಯೆಯನ್ನು ನಮ್ಮ ಕೇಂದ್ರ ಬೆಂಬಲಿಸುತ್ತದೆ. ರೈತರು ತಮ್ಮ ಜಮೀನುಗಳ ಬದುಗಳಲ್ಲಿ, ಹಾಳು ಬಿಟ್ಟಿರುವ ಜಾಗಗಳಲ್ಲಿ, ಹಲವು ಬಗೆಯ ಜೈವಿಕ ಇಂಧನ ಸಸಿಗಳನ್ನು ಬೆಳೆಸಲು ಕೇಂದ್ರವು ಉತ್ತೇಜಿಸುತ್ತಿದೆ. ನಮ್ಮ ಕೇಂದ್ರದಲ್ಲಿ ಪ್ರಯೋಗಾತ್ಮಕವಾಗಿ ಹೊಂಗೆ ಮತ್ತು ಸಿಮರೂಬ ಬೀಜಗಳಿಂದ ಎಣ್ಣೆ ಸಂಗ್ರಹಿಸಿ, ಜೈವಿಕ ಡೀಸೆಲ್ ಅನ್ನು ತಯಾರು ಮಾಡಿ, ಸಾರ್ವಜನಿಕರಿಗೆ ಮಾರಾಟ ಮಾಡಲಾಗುತ್ತಿದೆ. ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ವಾಹನಕ್ಕೆ ಶೇ. 10% ಮಟ್ಟದಲ್ಲಿ ಜೈವಿಕ ಡೀಸೆಲ್ ಬಳಸಲಾಗುತ್ತಿದೆ.

ತರಬೇತಿಗಳು (ಹೊರ ಮತ್ತು ಒಳ ಆವರಣ), ತಿಳುವಳಿಕಾ ಶಿಬಿರಗಳು, ವಸ್ತುಪ್ರದರ್ಶನ ಮಳಿಗೆಗಳು, ಪ್ರಾತ್ಯಕ್ಷಿಕೆಗಳು, ಸಂವಾದ ಭರಿತ ಉಪನ್ಯಾಸಗಳು, ಕಾರ್ಯಾಗಾರಗಳು ಹೀಗೆ ಹಲವು ಬಗೆಯ ಚಟುವಟಿಕೆಗಳನ್ನು ಜಿಲ್ಲೆಯ ಜನಸಾಮಾನ್ಯರಿಗೆ ಮತ್ತು ರೈತರಿಗೆ ಕೇಂದ್ರದ ಮೂಲಕ ನಡೆಸಲಾಗಿದೆ. ಕೇಂದ್ರದ ಕಾರ್ಯಗಳನ್ನು ಗಮನಿಸಿದ ಕೆಲವು ಯುವ ಮಿತ್ರರು, ಇದೇ ಬಗೆಯ ಘಟಕಗಳನ್ನು ತೆರೆದು ಇಂಧನ ಸ್ವಾವಲಂಬನೆ ಗಳಿಸುವೆಡೆಗೆ ಸಾಗುವ ಆಸಕ್ತಿತೋರಿಸಿ, ಮಾರ್ಗದರ್ಶನ ಪಡೆಯುತ್ತಿದ್ದಾರೆ. ಕೇಂದ್ರವು ತನ್ನದೇ ಆದ ನರ್ಸರಿಯೊಂದನ್ನು ಸ್ಥಾಪಿಸಿ, ಉಚಿತವಾಗಿ ಜೈವಿಕ ಇಂಧನ ಸಸಿಗಳನ್ನು ನಾಗರೀಕರಿಗೆ ವಿತರಿಸುವ ಕೆಲಸವನ್ನು ಮಾಡುತ್ತಿದೆ. **ಜೊತೆಗೆ 5 ಎಕರೆ ಪ್ರದೇಶದಲ್ಲಿ ಜೀವಿಕ ಇಂಧನ ಪಾರ್ಕ್‌ಅನ್ನು ಕೇಸರಿವನದಲ್ಲಿ ಸ್ಥಾಪಿಸಲಾಗಿದೆ.**

**ರಾಜ್ಯದಲ್ಲಿ ಜೈವಿಕ ಇಂಧನ ಕಾರ್ಯಕ್ರಮಗಳು**

1. **"ಬರಡು ಬಂಗಾರ" ಕಾರ್ಯಕ್ರಮ:** ಇಡೀ ರಾಜ್ಯದಲ್ಲಿ ಪಾಳು ಬಿದ್ದ ಅರಣ್ಯ ಅಥವಾ ಯಾವುದೇ ಸರ್ಕಾರಿ ಭೂಮಿ, ಬರಡು ಬಿದ್ದ ಭೂಮಿ, ಗೋಮಾಳ, ಕೆರೆ ಅಂಗಳದಲ್ಲಿ ಗ್ರಾಮ ಅರಣ್ಯ ಸಮಿತಿ, ಕೆರೆ ಬಳಕೆದಾರರ ಸಮಿತಿ ಹಾಗೂ ಇತರ ಸಮುದಾಯಗಳನ್ನು ತೊಡಗಿಸಿಕೊಂಡು ಜೈವಿಕ ಇಂಧನ ಸಸಿ ನೆಡುವ "ಬರಡು ಬಂಗಾರ" ಕಾರ್ಯಕ್ರಮ 2009-10ರಿಂದ ಜಾರಿಗೊಳಿಸಲಾಗಿದೆ. ರಾಜ್ಯದಲ್ಲಿ ಇಂತಹ 13.5 ಲಕ್ಷ ಹಕ್ಟೇರ್ ಭೂಮಿಯಲ್ಲಿ ಜೈವಿಕ ಇಂಧನ ಸಸಿ ನೆಡುವ ಕಾರ್ಯಕ್ಕೆ ಚಾಲನೆ ನೀಡಲಾಗಿದೆ.

2. **"ಹಸಿರು ಹೊನ್ನು" ಕಾರ್ಯಕ್ರಮ:** ರೈತರ ಜಮೀನಿನ ಬದು ಬೇಲಿಗುಂಟ ಹಾಗೂ ಪಾಳು ಬಿಟ್ಟ ಕೃಷಿ ಭೂಮಿಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಅನುದಾನ ಬಳಸಿಕೊಂಡು ಅನುಷ್ಠಾನಗೊಳಿಸುವ "ಹಸಿರು ಹೊನ್ನು ಕಾರ್ಯಕ್ರಮ" 2009-2010ರಿಂದ ಜಾರಿಗೊಳಿಸಿದೆ.

3. **"ಸುವರ್ಣ ಭೂಮಿ" ಯೋಜನೆ:** ಖುಷ್ಕಿ ಜಮೀನಿನಲ್ಲಿ ವ್ಯವಸಾಯ ಮಾಡುವ 5ಎಕರೆಗಳಿಗಿಂತ ಕಡಿಮೆ ಖುಷ್ಕಿ ಸಾಗುವಳಿ ಜಮೀನು ಹೊಂದಿದ ಸಣ್ಣ ಮತ್ತು ಅತಿ ಸಣ್ಣ ರೈತರ ಕೃಷಿ ಆದಾಯ ಹೆಚ್ಚಿಸಲು ಪ್ರತಿ ರೈತ ಕುಟುಂಬಕ್ಕೆ ರೂ. 10.000/- ಗಳವರೆಗೆ ರೈತರ ಬ್ಯಾಂಕ್ ಖಾತೆಗೆ ಸಹಾಯಧನ ಜಮೆ ಮಾಡುವ ಯೋಜನೆ. ಈ ಯೋಜನೆಯಡಿ ಪಡೆದ ಸಾಹಾಯಧನದಿಂದ ರೈತರು ತಮ್ಮ ಜಮೀನಿನ ಬದು, ಬೇಲಿಗುಂಟ ಜೈವಿಕ ಇಂಧನ ಸಸಿ ನೆಡಲು ಅವಕಾಶ ಕಲ್ಪಿಸಿದೆ. 2011-12ನೇ ಸಾಲಿನಲ್ಲಿ ಒಂದು ಲಕ್ಷ ರೈತರಿಗೆ ಈ ಯೋಜನೆಯ ಲಾಭ ಸಿಗಲಿದ್ದು, ಅದಕ್ಕಾಗಿ ರೂ. 100.00 ಕೋಟಿ ಅನುದಾನ ಕಾಯ್ದಿರಿಸಿದೆ.

4. **ಕ್ಲೋನಲ್ ಆರ್ಚರ್ಡ್‌ಗಳ ನಿರ್ಮಾಣ ಹಾಗೂ ಅಭಿವೃದ್ಧಿ:** ರಾಜ್ಯದ ವಿವಿಧ ಹತ್ತು ಸ್ಥಳಗಳಲ್ಲಿ ಕಸಿ ಮಾಡಿದ ತಳಿಗಳ ಅಭಿವೃದ್ಧಿ ಹಾಗೂ ಸ್ಥಳೀಯ ಜೈವಿಕ ಇಂಧನ ಮರಗಳ ಅಭಿವೃದ್ಧಿಗಾಗಿ ಅರಣ್ಯ ಇಲಾಖೆಯ ಸಹಕಾರದೊಂದಿಗೆ ರಾಜ್ಯದಲ್ಲಿ ಕ್ಲೋನಲ್ ಆರ್ಚರ್ಡ್‌ಗಳ ನಿರ್ಮಾಣ ಹಾಗೂ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ.

5. **ಜೈವಿಕ ಇಂಧನ ಮಾಹಿತಿ ಹಾಗೂ ಪ್ರಾತ್ಯಕ್ಷಿಕೆ ಕೇಂದ್ರಗಳ ಸ್ಥಾಪನೆ:** ಜೈವಿಕ ಇಂಧನ ಕೃಷಿಯಲ್ಲಿ ತೊಡಗಿಸಲ್ಪಟ್ಟಿರುವ ರೈತರಿಗಾಗಿ, ಉದ್ಯಮಿಗಳಿಗಾಗಿ, ಸಾರ್ವಜನಿಕರಿಗಾಗಿ ರಾಜ್ಯದ ಪ್ರತಿ ಜಿಲ್ಲೆಯಲ್ಲೂ ಜೈವಿಕ ಇಂಧನ ಕುರಿತು ಮಾಹಿತಿ ಹಾಗೂ ತಂತ್ರಜ್ಞಾನ ಒದಗಿಸುವ ಉದ್ದೇಶದಿಂದ ಮಾಹಿತಿ ಹಾಗೂ ಪ್ರಾತ್ಯಕ್ಷಿಕೆ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

ಈ ಕೇಂದ್ರಗಳಲ್ಲಿ ಜೈವಿಕ ಇಂಧನ ಕುರಿತು ಮರಗಳ, ಬೆಳೆಗಳ, ತಳಿಗಳ ಇಳುವರಿ ಕುರಿತು ಮಾಹಿತಿ, ಬೀಜೋತ್ಪನ್ನಗಳ ಬಳಕೆ–ಮೌಲ್ಯವರ್ಧನೆ ಕುರಿತು ಮಾಹಿತಿ; ಯಂತ್ರೋಪಕರಣಗಳ ಬಳಕೆಯಿಂದ ಎಣ್ಣೆ ನಂತರ ಜೈವಿಕ ಡೀಸೆಲ್ ಉತ್ಪಾದನೆ ಕುರಿತು ಮಾಹಿತಿ; ಜೈವಿಕ ಡೀಸೆಲ್ ಉತ್ಪಾದನೆ ಲಾಭದಾಯಕ ಉದ್ಯಮವೆಂದು ಸಾಬೀತು ಪಡಿಸುವುದು; ಜೈವಿಕ ಇಂಧನ ಬಳಕೆ–ಸಂಸ್ಕರಣೆ ಕುರಿತು ತರಬೇತಿ ನೀಡುವುದು; ಕಾಲೇಜು ಹಾಗೂ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ನೆರವಾಗುವುದು.

ಪ್ರಸ್ತುತ ರಾಜ್ಯದ 17 ಸ್ಥಳಗಳಲ್ಲಿ ಜೈವಿಕ ಇಂಧನ ಮಾಹಿತಿ ಹಾಗೂ ಪ್ರಾತ್ಯಕ್ಷಿಕೆ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿದ್ದು, ವರ್ಷಾಂತ್ಯದಲ್ಲಿ 13 ಹೆಚ್ಚಿನ ಕೇಂದ್ರಗಳು ಕಾರ್ಯಾರಂಭಗೊಳ್ಳಲಿವೆ. ಈ ಕೇಂದ್ರಗಳಲ್ಲಿ ಬೀಜ ಅರೆದು ಎಣ್ಣೆ ತೆಗೆಯುವ ವಿವಿಧ ಗಾತ್ರದ ಯಂತ್ರೋಪಕರಣಗಳಿದ್ದು, ಇತರ ಉಪ ಉತ್ಪನ್ನಗಳಾದ ಹಿಂಡಿ, ಗ್ಲಿಸರಿನ್‌ಗಳ ಉಪಯೋಗ ಹಾಗೂ ಇತರ ಮೌಲ್ಯವರ್ಧನೆಗೆ ಸಂಬಂಧಿಸಿದ ಸಂಪೂರ್ಣ ಮಾಹಿತಿ ಈ ಕೇಂದ್ರಗಳಿಂದ ದೊರಕಲಿದೆ. ಈ ಎಲ್ಲಾ ಕೇಂದ್ರಗಳಲ್ಲಿ ದಿನಕ್ಕೆ 100 ಲೀಟರ್ ಬಯೋ ಡೀಸೆಲ್ ತಯಾರಿಕಾ ಸಾಮರ್ಥ್ಯದ ಘಟಕಗಳನ್ನು ಸ್ಥಾಪಿಸಲಾಗಿದೆ.

6. **ಜೈವಿಕ ಇಂಧನ ಉದ್ಯಾನವನ ಸ್ಥಾಪನೆ:** ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಸಹಯೋಗದಿಂದ ಜೈವಿಕ ಇಂಧನ ಉದ್ಯಾನವನವನ್ನು ಹಾಸನ ಜಿಲ್ಲೆಯ ಮಡೇನೂರಿನಲ್ಲಿ ಸ್ಥಾಪಿಸಿದ್ದು, ಜಿಲ್ಲೆಯ 2039 ಗ್ರಾಮಗಳಲ್ಲಿ ಮಾಹಿತಿ ಸಂಗ್ರಹಿಸಿ, 1041 ಗ್ರಾಮಗಳಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಜಿಲ್ಲೆಯ 70 ಗ್ರಾಮಗಳನ್ನು "ಜೈವಿಕ ಇಂಧನ ಗ್ರಾಮ"ಗಳೆಂದು ಘೋಷಿಸಲಾಗಿದೆ. ರಾಷ್ಟ್ರದಲ್ಲಿಯೇ ಪ್ರಥಮವಾಗಿ ಜೈವಿಕ ಇಂಧನ "Green Fuel Retail Outlet" ಪೆಟ್ರೋಲ್ ಪಂಪನ್ನು ಬಿಪಿಸಿಎಲ್ (BPCL)ಯೊಂದಿಗೆ ಈ ಕೇಂದ್ರದಲ್ಲಿ ಸ್ಥಾಪಿಸಲು ಒಡಂಬಡಿಕೆಗೆ (MOU) ಸಹಿ ಮಾಡಲಾಗಿದೆ.
7. **ಬಯೋ ಡೀಸೆಲ್ ಉತ್ಪಾದನೆ:** ಪರ್ಯಾಯ ಇಂಧನ ಉತ್ಪಾದನೆಗೆ ಬಂಡವಾಳ ಹೂಡಿಕೆ ಹಾಗೂ ಬಳಕೆಯನ್ನು ಗ್ರಾಹಕರಿಗೆ ತಲುಪಿಸುವ ಪ್ರಯತ್ನವಾಗಿ ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಮಾರ್ಗದರ್ಶನದಡಿಯಲ್ಲಿ, ರಾಜ್ಯದಲ್ಲೇ ಪ್ರಥಮವಾಗಿ Eco Green Fuels Pvt. Ltd. ಎಂಬ ಸಂಸ್ಥೆಯ ಬೆಂಗಳೂರಿನ ಪೀಣ್ಯಬಳಿ ಪ್ರತಿ ದಿನ 3,000 ಲೀಟರ್ ಬಯೋ ಡೀಸೆಲ್ ಉತ್ಪಾದಿಸುವ ಸಾಮರ್ಥ್ಯದೊಂದಿಗೆ ಯಶಸ್ವಿಯಾಗಿ ಸ್ಥಾಪಿತಗೊಂಡಿದೆ. ಅಲ್ಲದೇ, ಪ್ರತಿ ದಿನ 50 ಟನ್ ಬಯೋ ಡೀಸೆಲ್ ಉತ್ಪಾದಿಸುವ ಸಾಮರ್ಥ್ಯವುಳ್ಳ ಮತ್ತೊಂದು ಘಟಕ Southern Bio Diesel Technologies, ಬೆಂಗಳೂರಿನ ದೇವನಹಳ್ಳಿ ಸಮೀಪ ಯಶಸ್ವಿಯಾಗಿ ಸ್ಥಾಪಿತಗೊಳ್ಳುತ್ತಿದೆ.
8. **ಬಯೋ ಎಥೆನಾಲ್:** ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳಿಂದ ವಾರ್ಷಿಕ 135 ಮಿಲಿಯನ್ ಲೀಟರ್ ಉತ್ಪಾದನೆಯಾಗುತ್ತಿದ್ದು, 30–35 ಮಿಲಿಯನ್ ಲೀಟರ್ ಮಾತ್ರ ರಾಜ್ಯದಲ್ಲಿ ಪೆಟ್ರೋಲ್ ಮಿಶ್ರಣಕ್ಕೆ (ಶೇ. 5ರಷ್ಟು) ಬಳಕೆಯಾಗುತ್ತಿದೆ. ಉಳಿದಂತೆ ಉತ್ಪಾದನೆ ನೆರೆ ರಾಜ್ಯಗಳಲ್ಲಿ ತೈಲ ಮಿಶ್ರಣಕ್ಕೆ ಉಪಯೋಗವಾಗುತ್ತಿದೆ. ರಾಜ್ಯದಲ್ಲಿರುವ ಈ ಅಗಾಧ ಅವಕಾಶಗಳ ಸಮರ್ಪಕ ಬಳಕೆಯ ದಿಕ್ಕಿನಲ್ಲಿ ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.
9. **ಕಡಿಮೆ ಅವಧಿಯ ಬೆಳೆಗಳು:** ಮಳೆಯಾಧಾರಿತ ಖುಷ್ಕಿ ಭೂಮಿಯಲ್ಲಿ ಹರಳು, ಮರಗೆಣಸು, ಪುಂಡಿ ಇತ್ಯಾದಿಗಳಂತಹ ಅಲ್ಪಾವಧಿ ಬೆಳೆಗಳನ್ನು ಎರಡನೇ ಬೆಳೆಯಾಗಿ ಬೆಳೆಸಲು ಉತ್ತೇಜನ ನೀಡುವುದು; ಕೃಷಿ ಇಲಾಖೆಯಡಿ ಸಿಹಿಜೋಳ ಹಾಗೂ ಇತರೆ ಕೃಷಿ ತ್ಯಾಜ್ಯ ವಸ್ತುಗಳನ್ನು ಬಳಸಿ ಎಥೆನಾಲ್ ಉತ್ಪಾದನೆಗೆ ಸಂಶೋಧನೆ ನಡೆಸಲು ಚಾಲನೆ ನೀಡುವುದು.
10. **ಜೈವಿಕ ಇಂಧನ ಬಳಕೆ:** ಜೈವಿಕ ಇಂಧನ ಬಳಕೆಯನ್ನು ಪ್ರೋತ್ಸಾಹಿಸಲು ಕೆ.ಎಸ್. ಆರ್.ಟಿ.ಸಿ., ಬಿ.ಎಂ.ಟಿ.ಸಿ., ತೈಲ ಕಂಪೆನಿಗಳು, ಮತ್ತಿತರ ಸಂಸ್ಥೆಗಳ ಜೊತೆಗೆ ಚರ್ಚೆ ನಡೆಸಿ ಒಡಂಬಡಿಕೆಗಳನ್ನು ಮಾಡಲಾಗಿದೆ. ಸಾರಿಗೆ ಕ್ಷೇತ್ರದಲ್ಲಿ ರಾಷ್ಟ್ರದಲ್ಲಿಯೇ ವಿನೂತನ ಪ್ರಯೋಗವಾಗಿರುವ ಎಥೆನಾಲ್ ಮಿಶ್ರಿತ ಡೀಸೆಲ್ ಇಂಧನ ಬಳಕೆಗೆ ಉತ್ತೇಜನ ನೀಡಿದೆ. ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ 2000 ಬಸ್ಸುಗಳನ್ನು ಎಥೆನಾಲ್ ಮಿಶ್ರಿತ ಡೀಸೆಲ್‌ನಿಂದ ಓಡಿಸಲಾಗುತ್ತಿದ್ದು ಇದನ್ನು 5,500 ಬಸ್ಸುಗಳಿಗೆ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಶೇಕಡ 5, 10, 20 ಹಾಗೂ ಶೇಕಡ 100 ಮಿಶ್ರಿತ ಜೈವಿಕ ಡೀಸೆಲ್‌ನಿಂದ 500 ಬಸ್ಸುಗಳನ್ನು ಚಲಿಸಲಾಗುತ್ತಿದೆ.



ಶ್ರೀ ತರಳಬಾಳು ಜಗದ್ಗುರುಗಳಾದ ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಯವರು ಜೈವಿಕ ಇಂಧನವನ್ನು ಕಛೇರಿಯ ವಾಹನಕ್ಕೆ ಹಾಕಿ ಜಾಗೃತಿ ಆಂದೋಲನಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.



ಸ್ವಸಹಾಯ ಸಂಘದ ರೈತ ಮಹಿಳೆಯರಿಗೆ ತರಬೇತಿ.



ರೈತ ಮಹಿಳೆಯರಿಂದ ಬೀಜವನ್ನು ಕೊಳ್ಳುತ್ತಿರುವುದು.

## ಜೈವಿಕ ಇಂಧನ ಉತ್ಪಾದನೆಯ ಪ್ರಕ್ರಿಯೆ



ಸಿಪ್ಪೆ-ಬೀಜ ಬೇರ್ಪಡಿಸುವ ಯಂತ್ರ



ಎಣ್ಣೆ ತೆಗೆಯುವ ಯಂತ್ರ



ಎಣ್ಣೆ ತಿಳಿಗೊಳಿಸುವ ತೊಟ್ಟಿ



ಎಣ್ಣೆ ಶುದ್ಧೀಕರಣ ಯಂತ್ರ



ಎಣ್ಣೆಯಿಂದ ಜೈವಿಕ ಇಂಧನ ಯಂತ್ರ



ಜೈವಿಕ ಇಂದನ

## ಜೈವಿಕ ಇಂಧನ ಘೋಷವಾಕ್ಯಗಳು

* ಜೈವಿಕ ಇಂಧನ, ಭವಿಷ್ಯದ ಇಂಧನ
* ಬೆಳೆಯೋಣ ಬೆಳೆಯೋಣ
  ಹೊಂಗೆ ಸಿಮರೂಬಾ ಬೆಳೆಯೋಣ
  ಬೆಳೆಯೋಣ ಬೆಳೆಯೋಣ
  ಬೇವು ಹಿಪ್ಪೆ ಬೆಳೆಯೋಣ
* ಹೊಂಗೆ ಬಂಗಾರ
  ಬೆಳೆದರೆ ಭೂ ಸಿಂಗಾರ
* ಬೇವು ಕಹಿ, ಟ್ರ್ಯಾಕ್ಟರ್‌ಗೆ ಸಿಹಿ
* ಹಸಿರು ಹೊನ್ನು, ಹಸಿರು ಹಾದಿ
* ಬದುಗಳಲ್ಲಿ ಬೆಳೆದರೆ ಹೊಂಗೆ
  ನಮ್ಮ ಬಾಳಲಿ ಬರುವುದು ನಗೆ
* ಹೊಂಗೆ ಸೊಪ್ಪು, ಹಿಂಡಿ, ಎಣ್ಣೆ,
  ಡೀಸೆಲ್ಲು ಕೈ ತುಂಬಾ ಸಿಗುತ್ತೆ
  ಕಾಸು ಎಲ್ಲಾ ಮಾರಲು
* ಸಿಮರೂಬಾ, ಸುರ ಹೊನ್ನೆ, ಹಿಪ್ಪೆ
  ಹೊಂಗೆ, ಬೇವು, ಮತ್ತಿ ಸುಲಿದು ಸಿಪ್ಪೆ
  ಹಿಂಡಿದರೆ ಸುರಿವುದು ತೈಲದ ಧಾರೆ
  ಅಡಗಿದೆ ನೋಡು ಸಂಪತ್ತಿಲ್ಲಿ,
  ರೈತ ಬಂಧು ಕಣ್ತೆರೆ

## ಸಂಪರ್ಕಿಸಿ :

**ಡಾ|| ಟಿ.ಎನ್. ದೇವರಾಜ**
ಕಾರ್ಯಕ್ರಮ ಸಂಯೋಜಕರು,
ತರಳಬಾಳು ಕೃಷಿ ವಿಜ್ಞಾನ ಕೇಂದ್ರ,
ದಾವಣಗೆರೆ.
ಮೊ: 9449856876

**ಎಸ್.ಬಿ. ವಿಜಯಕುಮಾರ್**
ಕ್ಷೇತ್ರ ವ್ಯವಸ್ಥಾಪಕರು,
ತರಳಬಾಳು ಕೃಷಿ ವಿಜ್ಞಾನ ಕೇಂದ್ರ,
ದಾವಣಗೆರೆ.
ಮೊ: 9449128096

**ಜಿ.ಬಿ.ಪಿ. ರೇವಣಸಿದ್ದಪ್ಪ**
ಪ್ರಯೋಗಾಲಯ ಸಹಾಯಕರು
ತರಳಬಾಳು ಕೃಷಿ ವಿಜ್ಞಾನ ಕೇಂದ್ರ,
ದಾವಣಗೆರೆ.
ಮೊ: 9743737004

ಅಶ್ವಿನಿ ಆಫ್‌ಸೆಟ್ ಪ್ರಿಂಟ್ಸ್, ದಾವಣಗೆರೆ. ಮೊ: 9845781782